C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ. 115/2021

ದಿನಾಂಕಃ 01.03.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ : 20 ಪಿ. ಡಬ್ಲ್ಯೂ : 15

| | |
|---|---|
| ಸಾಕ್ಷಿದಾರರ ಹೆಸರು | ಆರ್ ಮಂಜುನಾಥ |
| ತಂದೆಯ ಹೆಸರು | ಲೇಟ್ ಕೆ ರಾಮಯ್ಯ |
| ವಯಸ್ಸು | 46 ವರ್ಷ |
| ಉದ್ಯೋಗ | ಎ ಎಸ್ ಐ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ |
| ವಾಸ | ಶ್ರೀರಂಗಪಟ್ಟಣ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ನಾನು 13.08.2013 ರಿಂದ 15.07.2021 ರವರೆಗೆ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ಹೆಚ್‌ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ನಾನು ದಿಃ 11.06.2020 ರಂದು ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಚಾಸಾ.26 ಪಿಎಸ್‌ಐ ರವರ ಆದೇಶದ ಮೇರೆಗೆ ಮೊಕದ್ದಮೆ ನಂಃ 94/2020 ರ ಪ್ರಕರಣದಲ್ಲಿ ಆರೋಪಿಯ ಪತ್ತೆಗಾಗಿ ನಾನು ಮತ್ತು ನನ್ನ ಸಹೊದ್ಯೋಗಿ ಚಾಸಾ.21 ಸಂದೇಶ್ ಪಟೇಲ್ ರವರು, ಅರೋಪಿ ಪತ್ತೆಗಾಗಿ ಬಾತ್ಮಿದಾರರಿಂದ ಮತ್ತು ಸಾರ್ವಜನಿಕರಿಂದ ಮಾಹಿತಿಯನ್ನು ಪಡೆದುಕೊಂಡು, ಆರೋಪಿ ಬೆಂಗಳೂರಿನಲ್ಲಿ ಇದ್ದಾರೆ ಎಂದು ಮಾಹಿತಿ ಸಿಕ್ಕಿದ ಮೆರೆಗೆ ದಿಃ 11.06.2020 ರಂದು ಬೆಂಗಳೂರಿಗೆ ಸಂಜೆ ತೆರಳಿ ಬೆಂಗಳೂರಿನಲ್ಲಿಯೇ ಉಳಿದುಕೊಂಡು, ಬಾತ್ಮಿದಾರರ ಮಾಹಿತಿಯ ಮೇರೆಗೆ ರಂಗನಾಥ ಪುರ, ಕಾಮಾಕ್ಷಿಪಾಳ್ಯ , ಬೆಂಗಳೂರು, ಡೋರ್ ನಂಃ 123/1, 3 ನೇ ಕ್ರಾಸ್ ಆರೋಪಿ ಇರುವ ಬಗ್ಗೆ ಮಾಹಿತಿ ತಿಳಿದುಕೊಂಡು, ದಿಃ 12.06.2020 ರಂದು ಬೆಳಿಗ್ಗೆ 6.00 ಕ್ಕೆ ಆರೋಪಿ ಇರುವ ಸ್ಥಳಕ್ಕೆ ಹೋದೆವು. ಅಲ್ಲೆ ಇದ್ದ ಆರೋಪಿಯನ್ನು ವಿಚಾರ ಮಾಡಲಾಗಿ, ದಿಲೀಪ ಜಿ, ಗೋಪಿ ಎಂದು ತಿಳಿಸಿದರು. ಆರೋಪಿಯನ್ನು ವಿಚಾರ ಮಾಡಲಾಗಿ ದಿಃ 04.06.2020 ರಂದು ಕಾಯಿ

ಕೀಳುವ ವಿಚಾರದಲ್ಲಿ ನನಗೂ ಮತ್ತು ನನ್ನ ಚಿಕ್ಕಪ್ಪನವರಿಗೂ ಗಲಾಟೆ ಆಗಿ ಕುಡಗೊ;ಲಿನಿಂದ ಹೊಡೆದಿರುತ್ತೇನೆ ಎಂದು ತಿಳಿಸಿದರು. ಆರೋಪಿಯನ್ನು ಬೆಂಗಳೂರಿನಿಂದ ಬೆಳ್ಳೂರು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಪಿಎಸ್‌ಐ ರವರ ಮುಂದೆ ಮುಂದಿನ ಕ್ರಮಕ್ಕಾಗಿ ಹಾಜರು ಪಡಿಸಿರುತ್ತೇನೆ. ನನ್ನ ನಿವೇದನೆಯನ್ನು ಈಗ ನೋಡುತ್ತಿದ್ದು, ಇದರಲ್ಲಿ ನನ್ನ ರುಜು ಇದೆ. ಇದನ್ನು ನಿಪಿ.21 ಎಂದು, ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು. ವಶಕ್ಕೆ ಪಡೆದುಕೊಂಡಿದ್ದ ವ್ಯಕ್ತಿಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲು ಃ ಆರೋಪಿಯ ಪರ ಶ್ರೀ ಎನ್.ಎನ್. ವಕೀಲರಿಂದ ಃ</u>

1) ನಾನು ಮತ್ತು ನನ್ನ ಸಹೋದ್ಯೋಗಿ ಚಾಸಾ 21 ಸಂದೇಶ್ ಪಟೇಲ್ ರವರು, ಆರೋಪಿಯ ಪತ್ತೆಗಾಗಿ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿಯ ಪೊಲೀಸ್ ಠಾಣೆಗೆ ಭೇಟಿ ಕೊಟ್ಟಿರಲಿಲ್ಲ. ನನ್ನ ಮೇಲಾಧಿಕಾರಿ, ಆರೋಪಿಯ ಪತ್ತೆಗಾಗಿ ನನ್ನನ್ನು ನೇಮಕ ಮಾಡಿದ ಆದೇಶ ಪತ್ರವನ್ನು ವಾಪಸ್ಸು ಮೇಲಾಧಿಕಾರಿಗೆ ಕೊಟ್ಟಿದ್ದೇನೆ. ನನ್ನ ವರದಿಯಲ್ಲಿ, ಬೆಳ್ಳೂರು ಪೊಲೀಸ್ ಠಾಣೆಯನ್ನು ಎಷ್ಟು ಗಂಟೆಗೆ ಬಿಟ್ಟಿದ್ದೆನು ಎಂಬುದು ನನ್ನ ವರದಿಯಲ್ಲಿ ನಮೂದು ಇಲ್ಲ. ಬೆಂಗಳೂರಿನಲ್ಲಿ, ಯಾವ ಏರಿಯಾದಲ್ಲಿ ನಾವು ತಂಗಿದ್ದೆವು ಎಂಬ ವಿಚಾರವನ್ನು ನಿವೇದನೆಯಲ್ಲಿ ಹೇಳಿಲ್ಲ. ಆರೋಪಿಯು, ಆ ಸಂದರ್ಭದಲ್ಲಿ ಮಹೇಶ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆನೆ ಎಂದು ತಿಳಿಸಿದರು. ಆರೋಪಿಯನ್ನು ವಿಚಾರ ಮಾಡಿದಾಗ, ಆರೋಪಿಯು, ದಿಃ 04.06.2020 ರಂದು ರಾತ್ರಿ, ಕಾಯಿ ಕೀಳುವ ವಿಚಾರದಲ್ಲಿ ನನಗೂ ಮತ್ತು ನನ್ನ ಚಿಕ್ಕಪ್ಪನಿಗೂ ಜಗಳವಾಗಿ, ಕುಡಗೋಲಿನಿಂದ ನನ್ನ ಚಿಕ್ಕಪ್ಪನಿಗೆ ಹೊಡೆದಿದ್ದೆನು ಎಂಬ ವಿಚಾರವನ್ನು ನಮಗೆ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ನೋಡಿ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಿರಲಿಲ್ಲ. ನಾನು ಮತ್ತು ಚಾಸಾ.21 ರವರು ಆರೋಪಿಯನ್ನು ವಿಚಾರಿಸಿದಾಗ, ಆರೋಪಿಯು, ನಾನು ಏನು ತಪ್ಪು ಮಾಡಿಲ್ಲ ಎಂದು ಹೇಳಿದರೂ ಸಹ, ನಾವು ಆರೋಪಿಯ ಮಾತನ್ನು ಕೇಳದೇ ನನ್ನ ಮೇಲಾಧಿಕಾರಿ ಮಾತನ್ನು ಕೇಳಿಕೊಂಡು ಆರೋಪಿಯನ್ನು ತಂದು ನನ್ನ ಮೇಲಾಧಿಕಾರಿಯುವರ ಮುಂದೆ ಹಾಜರು ಪಡಿಸಿದ್ದೆನು ಎಂದರೆ ಸರಿಯಲ್ಲ.

2) ಠಾಣೆಯಿಂದ ಬೆಂಗಳೂರಿಗೆ ಬಸ್ ನಲ್ಲಿ ಹೋದೆವು. ಈ ಬಗ್ಗೆ ನಿವೇದನೆಯಲ್ಲಿ ನಮೂದು ಇಲ್ಲ. ನಮ್ಮ ಮೇಲಾಧಿಕಾರಿಯವರ ಮಾತು ಕೇಳಿಕೊಂಡು, ಕೇಸಿಗೋಸ್ಕರ ನಿಪಿ.21 ನಿವೇದನೆಯನ್ನು ಸುಳ್ಳಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ 11.06.2020 ರಂದು ನಾನು ಮತ್ತು ನನ್ನ ಸಹೋದ್ಯೋಗಿ ಆರೋಪಿ ಪತ್ತೆಗಾಗಿ ಬೆಂಗಳೂರಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಕೇಸಿಗೋಸ್ಕರ ನಿಪಿ.21 ನಿವೇದನೆಯನ್ನು ಸುಳ್ಳಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.